

# ಗಿನ್ನೆಸ್ ನಾಯಿ

ನೋಡಲು ಬಹಳ ಮುದ್ದು ಮುದ್ದಾಗಿರುವ ನಾಯಿಯೊಂದು ತನ್ನ ಕಾಲುಗಳಿಂದ ಅತೀ ವೇಗವಾಗಿ ನಡೆದು ಎರಡು ಗಿನ್ನೆಸ್ ವಿಶ್ವ ದಾಖಲೆ ನಿರ್ಮಿಸಿದೆ. ಇತ್ತೀಚೆಗಷ್ಟೇ ಬಿಡುಗಡೆಯಾದ ಗಿನ್ನೆಸ್ ವಿಶ್ವ ದಾಖಲೆಗಳ 60 ನೇ ವಾರ್ಷಿಕೋತ್ಸವದ ಸಂಚಿಕೆಯಲ್ಲಿ ಈ ವಿಷಯ ಬಹಿರಂಗವಾಗಿದೆ.

ಕ್ಯಾಲಿಫೋರ್ನಿಯಾದ ಲಾಸ್ ಏಂಜಲೀಸ್ ನಲ್ಲಿರುವ ಜಿಫ್ ಹೆಸರಿನ ಪೊಮೇರಿಯನ್ ಜಾತಿಯ ಗಂಡು ನಾಯಿಯು ಬರೀ ಎರಡೇ ಕಾಲುಗಳಿಂದ ವೇಗವಾಗಿ ನಡೆಯಬಲ್ಲದು. ಈ ಶ್ವಾನವು ತನ್ನೆರಡು ಹಿಂಗಾಲುಗಳನ್ನು ಬಳಸಿಕೊಂಡು 10 ಮೀಟರ್ ದೂರವನ್ನು ಕೇವಲ 6.56 ಸೆಕೆಂಡ್‌ಗಳಲ್ಲಿ ಹಾಗೂ ತನ್ನೆರಡು ಮುಂಗಾಲುಗಳಿಂದ 5 ಮೀಟರ್ ದೂರವನ್ನು 7.76 ಸೆಕೆಂಡ್ ಗಳಲ್ಲಿ ಕ್ರಮಿಸಿ ಗಿನ್ನೆಸ್ ದಾಖಲೆಯ ಮನ್ನಣೆಯನ್ನು ಗಳಿಸಿಕೊಂಡಿದೆ.

ಪ್ರತಿ ದಿನವೂ ಜಿಫ್, ತನ್ನ ಮುಂಗಾಲುಗಳಿಂದ ಹಾಗೂ ಹಿಂಗಾಲುಗಳಿಂದ ಓಡುವುದನ್ನು ಅಭ್ಯಾಸ ಮಾಡುತ್ತಿತ್ತು. ಹೊಸ ವಿಶ್ವ ದಾಖಲೆ ನಿರ್ಮಿಸುವುದಕ್ಕಾಗಿ 10 ಸೆಕೆಂಡ್ ಒಳಗೆ 5 ಮತ್ತು 10 ಮೀಟರ್ ದೂರವನ್ನು ಈ ನಾಯಿಯು ಕ್ರಮಿಸಬೇಕಿತ್ತು. ಅಂತೆಯೇ ಜಿಫ್ ತನ್ನ ಮೊದಲ ಪ್ರಯತ್ನದಲ್ಲೇ ಯಶಸ್ಸು ಸಾಧಿಸಿ ತೋರಿಸಿತು.

ಬರೀ ಹಿಂಗಾಲು ಅಥವಾ ಮುಂಗಾಲುಗಳಿಂದ ಓಡುವುದಷ್ಟೇ ಅಲ್ಲ, ಈ ಜಾಣ ಶ್ವಾನಕ್ಕೆ ಶೇಕ್ ಹ್ಯಾಂಡ್ ಮಾಡುವುದು, ಸ್ಕೇಟ್ ಬಾರ್ಡರ್‌ನ ಸವಾರಿ ಹಾಗೆಯೇ ತನ್ನ ಕಾಲಿನ ಮುದ್ರೆಯನ್ನೊತ್ತಿ ಆಟೋಗ್ರಾಫ್ ಹಾಕುವುದೂ ಗೊತ್ತಿದೆ. ನಾಚಿಕೆ ಸ್ವಭಾವವುಳ್ಳ ಈ ನಾಯಿ ಮಾಲೀಕರು ಮಾತ್ರ ಎಲ್ಲಿಯೂ ಕಾಣಿಸಿಕೊಳ್ಳದೆ ಅನಾಮಿಕರಿಗಿಯೇ ಇದ್ದಾರೆ.

ಜಿಫ್‌ನ ಸಾಧನೆಯ ಸುದ್ದಿ ಅಂತರ್ಜಾಲದಲ್ಲಿ ವೇಗವಾಗಿ ಹರಡಿದೆ. ಕೆಟಿ ಪೆರ್ರಿ ಮ್ಯೂಸಿಕ್ ವೀಡಿಯೋದಲ್ಲೂ ಕಾಣಿಸಿಕೊಂಡ ಜಿಫ್, ಈಗ ದೊಡ್ಡ ಸೆಲೆಬ್ರಿಟಿಯಾಗಿದೆ. ಇದರ ಫೇಸ್ ಬುಕ್ ನಲ್ಲಿ (1.3 ಮಿಲಿಯನ್ ಲೈಕ್‌ಗಳು) ಟ್ವಿಟರ್ ಮತ್ತು ಯೂ ಟ್ಯೂಬ್ ನಲ್ಲಿ ಐದು ಲಕ್ಷಕ್ಕೂ ಹೆಚ್ಚು ಜನ ನೋಡಿದ್ದಾರೆ. ಇದು ನಾಯಿಯಂತೆ ಇರದೆ ಮುದ್ದು ಮುದ್ದಾಗಿರುವ ಜೀವಂತದ ಬೊಂಬೆಯಂತೆ ಇದೆ ಎನ್ನುವುದು ಅನೇಕರ ಅಭಿಮತ.

■ ವಿದ್ಯಾ ವಿ. ಹಾಲಭಾವಿ



